66. 1991 ರಿಂದ ಈ ರಾಜ್ಯದಲ್ಲಿ ನಾನು ಕಳೆದ ದಿನಗಳು ನನ್ನ ಮನದಲ್ಲಿ ಅಚ್ಚ ಹಸಿರಾಗಿ ಉಳಿದಿವೆ. ಕರ್ನಾಟಕದ ಜನತೆ ನನಗೆ ತೋರಿದ ಪ್ರೀತಿ, ವಿಶ್ವಾಸಗಳಿಂದ ನನ್ನ ಹೃದಯ ತುಂಬಿ ಬಂದಿದೆ. ವಿವಿಧ ಬಗೆಯ ಸಸ್ಯ ಮತ್ತು ಪ್ರಾಣಿ ಸಂಕುಲಗಳಿಂದ ಶ್ರೀಮಂತವಾಗಿರುವ, ಸ್ಥಳೀಯ ಸಂಪ್ರದಾಯಗಳಿಂದ ಮತ್ತು ಸಂಸ್ಕೃತಿಗಳಿಂದ ಸಂಪನ್ನವಾಗಿರುವ, ಭವ್ಯವಾದ, ಮನೋಹರವಾದ ಮತ್ತು ಸುಂದರವಾದ ಈ ರಾಜ್ಯದಲ್ಲಿ ಸಂಚರಿಸುವಾಗಲೆಲ್ಲ ನಾನು ಉಲ್ಲಸಿತನಾಗಿದ್ದೇನೆ. ಕರ್ನಾಟಕ ವಿಧಾನ ಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡುವುದು ನನಗೆ ಸಂತಸ ಮತ್ತು ಸಮಾಧಾನ ತಂದಿದೆ. ಈ ರಾಜ್ಯದ ಶ್ರದ್ಧಾನಿಷ್ಠ, ಪ್ರತಿಭಾವಂತ ಹಾಗೂ ಪ್ರಜ್ಞಾವಂತ ಜನತೆಗೆ ಈ ಸದನದ ಮಾನ್ಯ ಸದಸ್ಯರ ಮೂಲಕ ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ.

67. ಉಭಯ ಸದನಗಳಲ್ಲಿ ಮಾನ್ಯ ಸದಸ್ಯರುಗಳು ನಡೆಸುವಂಥ ಚರ್ಚೆಗಳು ಫಲಪ್ರದವಾಗಲೆಂದು ಹಾರೈಸುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ.

ಜೈ ಕರ್ನಾಟಕ, ಜೈ ಹಿಂದ್,

(3) ಸಂತಾಪ ಸೂಚನೆ :

*ಉಪಾಧ್ಯಕ್ಷರಾಗಿದ್ದ ಶ್ರೀ ಚಂದ್ರಶೇಖರ ಎಂ. ಮಾಮನಿ ಅವರ ನಿಧನದ ಬಗ್ಗೆ.*

ಸಭಾಧ್ಯಕ್ಷರು:

ಈ ಸದನದ ಉಪಾಧ್ಯಕ್ಷರಾಗಿದ್ದ, ನನ್ನ ಆತ್ಮೀಯ ಸ್ನೇಹಿತರೂ ಆಗಿದ್ದ, ಬೆಳಗಾವಿ ಜಿಲ್ಲೆಯ ಭಾಗದಲ್ಲಿ ತುಂಬಾ ಜನಪ್ರಿಯ ಹಾಗೂ ಸಭ್ಯ ರಾಜಕಾರಣಿ ಎಂದು ಹೆಸರು ಗಳಿಸಿದ್ದ ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿಯವರ ಅನಿರೀಕ್ಷಿತ ಹಾಗೂ ಅಕಾಲಿಕ ಮರಣ ಈ ಸದನಕ್ಕೆ, ರಾಜ್ಯಕ್ಕೆ ಹಾಗೂ ವೈಯಕ್ತಿಕವಾಗಿ ನನಗೆ ತುಂಬಾ ಕಷ್ಟವನ್ನುಂಟು ಮಾಡಿದೆ.

ಒಬ್ಬ ಪ್ರಾಮಾಣಿಕ ವ್ಯಕ್ತಿಯಾಗಿ, ಶಾಸಕರಾಗಿ 8-7-1996 ರಿಂದ ವಿಧಾನ ಸಭಾ ಉಪಾಧ್ಯಕ್ಷರಾಗಿ ಅವರು ಮಾಡಿರುವ ಸೇವೆ ಅನುಪಮ, ಅಪಾರ ಮತ್ತು ಅಗಾಧವಾದದ್ದು. ಸದನದಲ್ಲಿ ಆಳುವ ಪಕ್ಷ ಹಾಗೂ ವಿರೋಧ ಪಕ್ಷದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸದನದ ಘನತೆ, ಗೌರವಗಳಿಗೆ ಕುಂದುಂಟಾಗದಂತೆ ನಿಯಮಾನುಸಾರ ಸದನವನ್ನು ನಡೆಸುವಲ್ಲಿ ನನ್ನೊಂದಿಗೆ ಸಹಕರಿಸುತ್ತಿದ್ದ ಶ್ರೀ ಮಾಮನಿಯವರು ದಿನಾಂಕ 14-1-1999 ರಂದು ನಿಧನರಾದರು.

ದಿನಾಂಕ: 29-11-1937 ರಂದು ಬೆಳಗಾಂವ ಜಿಲ್ಲೆಯ ಸವದತ್ತಿಯಲ್ಲಿ ಜನಿಸಿದ ಇವರು, 1962 ರಲ್ಲಿ ರಾಜಕೀಯ ಪ್ರವೇಶಿಸಿ, 1967 ರಿಂದ 1977 ರವರೆಗೆ ಬೆಳಗಾಂವ ಜಿಲ್ಲಾ ಡಿ.ಸಿ.ಸಿ. ಬ್ಯಾಂಕಿನ ನಿರ್ದೇಶಕರಾಗಿ ಹಾಗೂ ಉಪಾಧ್ಯಕ್ಷರಾಗಿ, ಎ.ಪಿ.ಎಂ.ಸಿ. ಸದಸ್ಯರಾಗಿ, ಸವದತ್ತಿ ತಾಲ್ಲೂಕು ಜಿನ್ನಿಂಗ್ ಸೊಸೈಟಿ ನಿರ್ದೇಶಕರಾಗಿ 1982 ರಲ್ಲಿ ಸವದತ್ತಿ ರೋಟರಿ ಕ್ಲಬ್ ಅಧ್ಯಕ್ಷರಾಗಿ ಅಪಾರ ಸೇವೆ ಸಲ್ಲಿಸಿ ಜನಮನ್ನಣೆ ಗಳಿಸಿದ ಉತ್ತಮ ರಾಜಕೀಯ ಪಟುವಾಗಿದ್ದರು.

1985 ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಮತ್ತು 1994 ರಲ್ಲಿ ಜನತಾದಳದ ಅಭ್ಯರ್ಥಿಯಾಗಿ ಪರಸಗಡದ ವಿಧಾನ ಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀ ಮಾಮನಿಯವರು ರೈತರ ಹಾಗೂ ಜನಸಾಮಾನ್ಯರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ದಿಟ್ಟತನದಿಂದ ಬಗೆಹರಿಸುವಲ್ಲಿ ಯಶಸ್ವಿಯಾಗಿದ್ದರು.

ಶ್ರೀಯುತರು 1986 ರಲ್ಲಿ ಸವದತ್ತಿ ಶ್ರೀ ರೇಣುಕಾಯಲ್ಲಮ್ಮ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಶಿಕ್ಷಣರಂಗದಲ್ಲಿ ಅತ್ಯಂತ ಉನ್ನತ ಕೆಲಸ ಮಾಡಿದ್ದಾರೆ. ಮಲಪ್ರಭಾ ಸಹಕಾರಿ ನೂಲಿನ ಗಿರಣಿಯನ್ನು ಸ್ಥಾಪಿಸಿ ಅದರ ಕಾರ್ಯಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕ್ಷೇತ್ರದ ಅಭಿವೃದ್ಧಿಯನ್ನು ಒಂದು ಗೀಳಿನಂತೆ ಹಚ್ಚಿಕೊಂಡಿದ್ದು ಸವದತ್ತಿ ರೇಣುಕಾಯಲ್ಲಮ್ಮ ದೇವಸ್ಥಾನದ ಧರ್ಮದರ್ಶಿ ಮಂಡಲದ ಟ್ರಸ್ಟಿಯಾಗಿ, ದೇವಸ್ಥಾನ ಮತ್ತು ಅದರ ಪರಿಸರದ ಅಭಿವೃದ್ಧಿಗೆಂದೇ ಮಾಸ್ಟರ್ ಪ್ಲಾನೊಂದನ್ನು ತಯಾರಿಸಿ ತೀವ್ರಗತಿಯಿಂದ ಜಾರಿಗೊಳಿಸಲು ಅತ್ಯಂತ ಶ್ರಮ ವಹಿಸಿದ್ದರು. ಶ್ರೀಯುತ ಮಾಮನಿಯವರ ಅಕಾಲಿಕ ನಿಧನದಿಂದ ನನಗೆ ಅತೀವ ದುಃಖವಾಗಿದೆ. ಈಗ ಸಭಾ ನಾಯಕರು ಮಾಮನಿಯವರ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು.

+ ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :— ಸನ್ಮಾನ್ಯ ಅಧ್ಯಕ್ಷರೆ, ತಾವು ವ್ಯಕ್ತಪಡಿಸಿರತಕ್ಕಂಥ ಭಾವನೆಯನ್ನು ನಾವೆಲ್ಲರೂ ಸಂಪೂರ್ಣವಾಗಿ ಸಮ್ಮತಿಸುತ್ತೇವೆ. ಶ್ರೀ ಚಂದ್ರಶೇಖರ ಮಾಮನಿಯವರಲ್ಲಿ ಒಂದು ವಿಶೇಷವಾದಂತಹ ಗುಣ ಇತ್ತು. ಅದೇನೆಂದರೆ, ಪ್ರಾಮಾಣಿಕತೆಗೆ ಸಂಬಂಧಪಟ್ಟ ಹಾಗೆ ಯಾವುದಾದರೊಂದು ವಿಷಯ ಬಂದಾಗ ಮೊದಲು ಪ್ರಾಮಾಣಿಕತೆಗೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದರೇ ಹೊರತು, ರಾಜಕೀಯ ಅಧಿಕಾರಕ್ಕಾಗಲಿ, ಮತ್ತೊಂದಕ್ಕಾಗಲಿ ಯಾವುದೇ ಯೋಜನೆ ಇರಲಿ, ಕೊಡುತ್ತಾ ಇರಲಿಲ್ಲ. ಆ ರೀತಿಯ ಅಪರೂಪದ ವ್ಯಕ್ತಿ ಆಗಿದ್ದರು. ಎಲ್ಲದಕ್ಕಿಂತ ಮುಖ್ಯವಾಗಿ ಶ್ರೀಯುತರು ಹಾಕುತ್ತಿದ್ದ ಖಾದಿ ಟೋಪಿ ಎಷ್ಟು ಮೊನಚಾಗಿ, ಅಚ್ಚುಕಟ್ಟಾಗಿರುತ್ತಿತ್ತು ಎಂದರೆ, ಅದು ಅವರ ಕ್ಯಾರೆಕ್ಟರ್‌ನ್ನು ಪ್ರತಿಬಿಂಬಿಸುತ್ತಿತ್ತು. ಶ್ರೀಯುತರು ಶುದ್ಧ ಹೃದಯವನ್ನು ಹೊಂದಿದಂಥವರಾಗಿದ್ದು, ಯಾವರೀತಿ ಖಾದಿ ಟೋಪಿ ಬಿಳುಪು ಮತ್ತು ಅಚ್ಚುಕಟ್ಟಾಗಿ ಇತ್ತೋ, ಅದೇ ರೀತಿ ಅವರ ವ್ಯಕ್ತಿತ್ವ ಇತ್ತು. ಶ್ರೀಯುತರಿಂದ ಹೆಚ್ಚಿನ ಸೇವೆಯನ್ನು ನಿರೀಕ್ಷೆ ಮಾಡಿದ ಆ ಪ್ರದೇಶದ ಜನರು ಇವರ ಅಗಲಿಕೆಯಿಂದ ಬಹಳ ದುಃಖ ಪಟ್ಟರು. ಆ ದಿನ ನಾನು ಅಲ್ಲಿಗೆ ಭೇಟಿ ನೀಡಿದಾಗ ನೋಡಿದೆ.

ತಮ್ಮ ಹಾಗೆ ನಾನು ಈ ಸದನದ ಸಭಾನಾಯಕನಾಗಿ ಶ್ರೀಯುತರ ವ್ಯುತರಿಂದ ಇವರ ಕುಟುಂಬಕ್ಕೆ ಆಗಿರುವ ದುಃಖವನ್ನು ಭರಿಸತಕ್ಕಂಥ ಶಕ್ತಿ ನೀಡಲಿ ಎಂಬ ಆಶೆಯನ್ನು ವ್ಯಕ್ತಪಡಿಸಿ ನನ್ನ ಅಂತಿಮ ಶ್ರದ್ಧಾಂಜಲಿಯನ್ನು ಅವರಿಗೆ ಅರ್ಪಿಸುತ್ತೇನೆ.

+ ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) :— ಸನ್ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂಥ ಈ ಸಂತಾಪಸೂಚಕ ನಿರ್ಣಯವನ್ನು ಬೆಂಬಲಿಸುತ್ತೇನೆ. ಮಾನ್ಯ ಚಂದ್ರಶೇಖರ ಮಾಮನಿಯವರು ಒಬ್ಬ ಸ್ನೇಹ ಜೀವಿ ಮತ್ತು ಸಹೃದಯ ವ್ಯಕ್ತಿತ್ವವನ್ನು ಹೊಂದಿದಂಥ ರಾಜಕಾರಣಿ ಆಗಿದ್ದರು. ಶ್ರೀಯುತರು ಚಿಕ್ಕವರ ಜೊತೆಯಲ್ಲಿ ಚಿಕ್ಕವರಾಗಿ ಹಾಗೂ ವಯಸ್ಸಿನಲ್ಲಿ ಇವರಿಗಿಂತ ದೊಡ್ಡವರ ಜೊತೆಯಲ್ಲಿ ತಮ್ಮ ಒಡನಾಟದಿಂದ ವರ್ತಿಸತಕ್ಕಂಥ ಮನೋಭಾವನೆಯನ್ನು ಇಟ್ಟುಕೊಂಡಿದ್ದರು. ಇವರು ನಿಧನ ಹೊಂದಿದ 15-20 ದಿವಸಗಳ ಹಿಂದೆ ನಾನು ಚಂದ್ರಶೇಖರ ಮಾಮನಿಯವರ ಜೊತೆ ಅವರ ಕ್ಷೇತ್ರಕ್ಕೆ ಹೋಗಿದ್ದೆ. ಶ್ರೀಯುತರು ಆ ಕ್ಷೇತ್ರದಲ್ಲಿ ಅಪಾರವಾದಂತಹ ಜನಪ್ರಿಯತೆಯನ್ನು ಪಡೆದುಕೊಂಡಿದ್ದರು. ಕಾರಣ ಏನೆಂದರೆ, ಇವರಿಗೆ ಜನರ ಪರವಾಗಿ ಕಾಳಜಿ ಇತ್ತು ಹಾಗೆಯೇ ಈ ಕ್ಷೇತ್ರವನ್ನು ಅಭಿವೃದ್ಧಿ ಮಾಡಬೇಕೆಂದು ಪ್ರಾಮಾಣಿಕತೆಯ ಕಾಳಜಿ ಇಟ್ಟುಕೊಂಡು ಆ ಕ್ಷೇತ್ರದ ಎಲ್ಲಾ ವರ್ಗದ ಜನರ ಪ್ರೀತಿ ಮತ್ತು ವಿಶ್ವಾಸವನ್ನು ಗಳಿಸಿಕೊಂಡಿದ್ದರು. ವಿಧಾನಸಭೆಯಲ್ಲಿ ಉಪಾಧ್ಯಕ್ಷರಾಗಿ ಬಹಳ ಉತ್ತಮ ಕೆಲಸವನ್ನು ಮಾಡಿದ್ದಾರೆ. ಶ್ರೀಯುತರು ಹಿಂದೆ ಶಾಸಕರಾಗಿದ್ದಾಗ ಮತ್ತು 1994 ರಲ್ಲಿ ಶಾಸಕರಾಗಿ ಉಪಾಧ್ಯಕ್ಷರಾಗಿದ್ದಾಗ ನಾನು ಬಹಳ ಹತ್ತಿರದಿಂದ ಇವರನ್ನು ನೋಡಿದ್ದೇನೆ. ಯಾವತ್ತೂ ಕೂಡ ಯಾರ ಮನಸ್ಸಿಗೂ ನೋವಾಗುವಂತೆ ಮಾತನಾಡಿದವರಲ್ಲ. ಶ್ರೀಯುತರು ಬಹಳ ಒಳ್ಳೆಯ ಹೃದಯ ಇಟ್ಟುಕೊಂಡಿದ್ದರು. ರಾಜಕೀಯ ಕ್ಷೇತ್ರದಲ್ಲಿಷ್ಟೇ ಅಲ್ಲದೆ ಸಹಕಾರ ಕ್ಷೇತ್ರದಲ್ಲಿಯೂ ಕೂಡ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ನೂಲಿನ ಗಿರಣಿ ಮತ್ತು ರೋಟರಿ ಕ್ಲಬ್‌ನಲ್ಲಿ ಕೆಲಸ ಮಾಡಿರುವುದಲ್ಲದೇ, ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮಾಜ ಸೇವೆಗೆ ತಮ್ಮ ಜೀವನವನ್ನು ಮುಡುಪಾಗಿಟ್ಟುಕೊಂಡಿದ್ದರು. ಆದರೆ, ಇವತ್ತು ಇವರ ಅಕಾಲಿಕ ಮರಣದಿಂದ ನಮ್ಮನ್ನೆಲ್ಲಾ ಬಿಟ್ಟು ಹೋಗಿದ್ದಾರೆ. ಇವರ ಆತ್ಮಕ್ಕೆ ಶಾಂತಿ ದೊರಕಲಿ, ಹಾಗೆಯೇ ಇವರ ಕುಟುಂಬವರ್ಗದವರೆಲ್ಲರಿಗೂ ಕೂಡ ಶ್ರೀಯುತರ ಸಾವಿನಿಂದ ಆಗಿರತಕ್ಕಂಥ ದುಃಖವನ್ನು ಭರಿಸತಕ್ಕಂಥ ಶಕ್ತಿ ದೊರಕಲಿ ಎನ್ನತಕ್ಕಂಥ ಆಶಯವನ್ನು ವ್ಯಕ್ತಪಡಿಸಲು ಇಚ್ಛಿಪಡುತ್ತೇನೆ.

(ಮಾನ್ಯ ಸದಸ್ಯರಾದ ಚಂದ್ರಣ್ಣನವರು ಸೆಲ್ಲೂಲಾರ್ ಫೋನ್‌ನಲ್ಲಿ ಮಾತನಾಡುತ್ತಿದ್ದಾಗ ಮಾನ್ಯ ಅಧ್ಯಕ್ಷರು ಈ ರೀತಿ ಹೇಳಿದರು)

ಅಧ್ಯಕ್ಷರು :— ದೇವನಹಳ್ಳಿ ಶಾಸಕರಾದ ಚಂದ್ರಣ್ಣನವರು ಸಭೆ ಮುಗಿದ ನಂತರ ದಯಮಾಡಿ ಬಂದು ನನ್ನನ್ನು ನೋಡಬೇಕು. ತಾವು ಸೆಲ್ಲೂಲಾರ್ ಫೋನ್ ಇಟ್ಟುಕೊಂಡು ಅಸೆಂಬ್ಲಿಯಲ್ಲಿ ಮಾತನಾಡುತ್ತಿದ್ದೀರಿ. ಅಸೆಂಬ್ಲಿಯನ್ನೇನಾದರೂ ಕ್ಲಬ್‌ಗೆ ಕನ್‌ವರ್ಟ್ ಮಾಡುತ್ತಿದ್ದೀರಾ?

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ಸನ್ಮಾನ್ಯ ಅಧ್ಯಕ್ಷರೆ, ಈ ಸದನದ ಉಪಾಧ್ಯಕ್ಷರಾಗಿದ್ದ ಮತ್ತು ನನ್ನ ಆತ್ಮೀಯರಾಗಿರತಕ್ಕಂಥ ಶ್ರೀಮಾನ್ ಚಂದ್ರಶೇಖರ್ ಮಾಮನಿಯವರು ಇವತ್ತು ನಮ್ಮಿಂದ ಆಗಲಿ ಹೋಗಿದ್ದಾರೆ. ನಾನು ಬಂದ ತಕ್ಷಣ ಇಲ್ಲಿ ಯಾರೋ ಒಬ್ಬ ಸದಸ್ಯರು ಕುಳಿತುಕೊಳ್ಳಬೇಕೆಂದು ಬಂದಾಗ, ಇಲ್ಲಿ ಉಪಾಧ್ಯಕ್ಷರಾದ ಚಂದ್ರಶೇಖರ ಮಾಮನಿಯವರು ಕುಳಿತುಕೊಳ್ಳುತ್ತಾರೆಂದು ಹೇಳಿದಾಗ ಅವರು ಸ್ವಲ್ಪ ಆ ಕಡೆಗೆ ಹೋದರು. ಚಂದ್ರಶೇಖರ ಮಾಮನಿಯವರು ಇಲ್ಲವೆಂದು ನನಗೆ ಆಮೇಲೆ ಅರಿವು ಆಯಿತು. ಶ್ರೀಯುತರು ಬದುಕಿಲ್ಲದಿದ್ದರೂ ಕೂಡ ಅವರು ಇಲ್ಲಿಯೇ ಇದ್ದಾರೆ ಎನ್ನತಕ್ಕಂಥ ಭಾವನೆ ನಮಗೆಲ್ಲರಿಗೂ ಇದೆ. ಏಕೆಂದರೆ, ತುಂಬ ಚಿಕ್ಕವಯಸ್ಸಿನಲ್ಲಿಯೇ ನಾವು ಅವರನ್ನು ಕಳೆದುಕೊಂಡಿದ್ದೇವೆ. ಶ್ರೀಯುತರು ಶಾಸಕರಾಗಿ ಮತ್ತು ಉಪಾಧ್ಯಕ್ಷರಾಗಿ ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅನೇಕ ಸಾರಿ ತಾವು ಅಲ್ಲಿಗೆ ಕರೆದು ಕೂಡಿಸಿ ಕೆಲವು ಸೂಚನೆಗಳನ್ನು ಕೊಟ್ಟರೂ ಸಹ ಅನೇಕ ಸದಸ್ಯರು ಮಾತನಾಡುವುದಕ್ಕೆ ಸಾಕಷ್ಟು ಸಮಯವನ್ನು ಕೊಡುತ್ತಿದ್ದರು. ಅನೇಕ ಜನ ಹೊಸ ಸದಸ್ಯರು ದೀರ್ಘವಾದ ಭಾಷಣ ಮಾಡುತ್ತಿದ್ದರೂ ಕೂಡ ಬೇಗ ಮುಗಿಸಬೇಕೆಂದು ಹೇಳುತ್ತಿದ್ದರೆ ಹೊರತು ಮನನೋಯಿಸಿ ತಕ್ಷಣ ಕಠಿಣವಾಗಿ ಮಾತನಾಡತಕ್ಕಂಥ ಸ್ವಭಾವ ಅವರಿಗೆ ಇರಲಿಲ್ಲ. ಇಂಥ ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಒಂದು ದಿವಸ ಎ.ಪಿ.ಎಂ.ಸಿ. ಬಿಲ್‌ನ್ನು ಇಲ್ಲಿ ಮಂಡನೆ ಮಾಡಿದಾಗ ಅದರ ಮಾಹಿತಿ ಅವರಿಗೆ ಗೊತ್ತಿರಲಿಲ್ಲ. ನಾನು ಸುಮ್ಮನೆ, ಮಾನ್ಯ ಉಪಾಧ್ಯಕ್ಷರೆ ಎ.ಪಿ.ಎಂ.ಸಿ. ಬಿಲ್‌ನ್ನು ನೋಡಿದ್ದೀರಾ ಎಂದು ಕೇಳಿದೆ. ನಾನು ನೋಡಿಲ್ಲ, ಅದರೊಳಗೆ ಏನಿದೆ ಎಂದು ಕೇಳಿದರು. ಎ.ಪಿ.ಎಂ.ಸಿ.ಯಿಂದ ರೈತರಿಗೆ ನೇರವಾಗಿ ಚೆಕ್ ಕೊಟ್ಟರೆ ನಿಮ್ಮ ಕಮಿಷನ್ ಏಜೆಂಟರ್‌ಗಳಿಗೆ ತೊಂದರೆ ಆಗುತ್ತದೆಂದು ನಾನು ಹೇಳಿದೆ. ಏಂಡಿತ ಇದರಿಂದ ತೊಂದರೆಯಾಗುತ್ತದೆಂದು ತಕ್ಷಣ ನನ್ನ ಕೈಯಲ್ಲಿ ಬಿಲ್‌ನ್ನು ತರಿಸಿಕೊಂಡು ಮುಖ್ಯಮಂತ್ರಿ ಮತ್ತು ಮಂತ್ರಿಗಳನ್ನು ನೋಡಿ, ಇದರಿಂದ ಇಡೀ ರಾಜ್ಯದಲ್ಲಿ ಈ ವರ್ಗದವರಿಗೆ ತೊಂದರೆಯಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಕೊನೆಗೆ ಇದು ಹೆಚ್ಚು ಕಡಿಮೆ ೧ ತಿಂಗಳು ಮುಂದಕ್ಕೆ ಹೋಯಿತು. ಆಮೇಲೆ ಸರ್ಕಾರ ಮತ್ತೆ ನಿರ್ಣಯ ತೆಗೆದುಕೊಂಡು ಇಂಟ್ರಡ್ಯೂಸ್ ಮಾಡಿದರು. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಯಾವುದೇ ಒಂದು ಕೆಲಸ ಅವರ ಮನಸ್ಸಿಗೆ ಸರಿಯಾಗಿಲ್ಲ ಎಂದು ಅನಿಸಿದ ಸಂದರ್ಭದಲ್ಲಿ ಅವರೊಬ್ಬರೆ ಇದ್ದರೂ ಕೂಡ ಅದನ್ನು ಪ್ರತಿಪಾದನೆ ಮಾಡತಕ್ಕಂಥದ್ದು ಅಥವಾ ಅದರ ಬಗ್ಗೆ ಹೇಳತಕ್ಕಂಥ ಕೆಲಸವನ್ನು ಮಾಡುತ್ತಿದ್ದರು. ವಿಶೇಷವಾಗಿ ರೇಣುಕಾ ಎಲ್ಲಮ್ಮ ದೇವಸ್ಥಾನದ ಅಭಿವೃದ್ಧಿಗಾಗಿ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡತಕ್ಕಂಥ ಗುಣ ಅವರದಾಗಿತ್ತು. ಇವತ್ತಿನದಿವಸ ಆ ದೇವಾಲಯದ ಅಭಿವೃದ್ಧಿ ಕೆಲಸವನ್ನು ಸಾಕಷ್ಟು ಮಾಡಿದ್ದಾರೆ. ಅಭಿವೃದ್ಧಿ ಶೀಲ

ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಶ್ರೀಯುತರ ಅಗಲಿಕೆಯಿಂದ ಇವರ ಕುಟುಂಬವರ್ಗದವರಿಗೆ ಸಹಿಸಲಾರದಷ್ಟು ತೊಂದರೆ, ನಷ್ಟವಾಗಿದೆ. ಇದನ್ನು ಭರಿಸತಕ್ಕಂಥ ಶಕ್ತಿಯನ್ನು ದೇವರು ಅವರಿಗೆ ಕೊಡಲೆಂದು ಈ ಸಂದರ್ಭದಲ್ಲಿ ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :— ಮಾನ್ಯ ಅಧ್ಯಕ್ಷರೆ, ಈ ಸದನದ ಉಪಾಧ್ಯಕ್ಷರಾಗಿದ್ದ ಸನ್ಮಾನ್ಯ ಚಂದ್ರಶೇಖರ ಮಾಮನಿಯವರು ನಮ್ಮನ್ನು ಅಗಲಿದ್ದಾರೆ. ಈ ಸಂದರ್ಭದಲ್ಲಿ ಅವರನ್ನು ನೆನಪು ಮಾಡಿಕೊಳ್ಳಬೇಕು ಎನ್ನುವುದಕ್ಕಿಂತ, ರಾಜಕಾರಣಿಗಳಾದ ನಾವುಗಳು ಯಾರು ಮಾದರಿ ರಾಜಕಾರಣಿ ಆಗಬೇಕೆಂದು ಅಪೇಕ್ಷಿಪಡುತ್ತಾರೆಯೋ ಅವರು ಇಂಥ ವ್ಯಕ್ತಿಯ ಜೀವನಗಳ ನಡವಳಿಕೆಗಳನ್ನು ನೋಡಿ ಕಲಿಯಬೇಕಾದದ್ದು ತುಂಬ ಇದೆ ಎಂದು ನನಗನ್ನಿಸುತ್ತದೆ. ತುಂಬ ಹತ್ತಿರದಿಂದ ನೋಡಿರುವ ಮಾನ್ಯ ಚಂದ್ರಶೇಖರ ಮಾಮನಿಯವರು ಸಭ್ಯ ರಾಜಕಾರಣಿ, ತುಂಬ ಸರಳ ಜೀವನ ಮತ್ತು ಪ್ರಾಮಾಣಿಕ ವ್ಯಕ್ತಿ ಹಾಗೂ ಆದರ್ಶ ಭಾವನೆಯನ್ನು ಹೊಂದಿರತಕ್ಕಂಥವರೆಂದು ನನಗನ್ನಿಸುತ್ತದೆ. ಇವತ್ತು ಒಬ್ಬ ರಾಜಕಾರಣಿಯಾಗಿ ಜೊತೆಗೆ ಶಾಸಕನಾದ ಒಬ್ಬ ವ್ಯಕ್ತಿ, ಜನಗಳ ಹತ್ತಿರ ಹೇಗೆ ಇರಬೇಕು ಎನ್ನುವುದನ್ನು ಕೂಡ ನಾವು ಕಲಿಯಬೇಕಾಗುತ್ತದೆ. ಕ್ಷೇತ್ರದ ಅಭಿವೃದ್ಧಿಯನ್ನು ಅವರು ಒಂದು ಗೀಳಿನಂತೆ ಹಚ್ಚಿಕೊಂಡಿದ್ದರು ಎನ್ನುವಂಥದ್ದನ್ನು ಈ ಸಂತಾಪ ಸೂಚನೆಯ ವಿಚಾರದಲ್ಲಿ ತಾವು ಏನು ಈ ವಾಕ್ಯವನ್ನು ತಂದಿರುತ್ತೀರಿ ನಿಜಕ್ಕೂ ಕೂಡ ಇದನ್ನು ಮತ್ತೆ ಮತ್ತೆ ನಾವೆಲ್ಲ ಶಾಸಕರು, ರಾಜಕಾರಣಿಗಳು ಹಾಗೂ ಜನ ಪ್ರತಿನಿಧಿಗಳು ಓದಬೇಕು ಎನಿಸುತ್ತದೆ. ಕ್ಷೇತ್ರದ ಅಭಿವೃದ್ಧಿಯನ್ನು ಗೀಳಿನಂತೆ ಹಚ್ಚಿಕೊಂಡ ಒಬ್ಬ ವ್ಯಕ್ತಿಯ ಕಾರ್ಯಗಳನ್ನು ನೋಡಿದಾಗ ನಮ್ಮ ನಮ್ಮ ಕ್ಷೇತ್ರದಲ್ಲಿ ನಾವು ಕೂಡ ಮಾಡಬೇಕು ಎನ್ನುವುದು ನಮಗೆ ಅರ್ಥವಾಗುತ್ತದೆ. ಆಗ ಆ ಜನಗಳ ಹಾಗೂ ಅವರ ಋಣ ತೀರಿಸಬಹುದೆಂದು ನನಗೆ ಅನಿಸುತ್ತದೆ. ಇಂತಹ ವ್ಯಕ್ತಿಗಳನ್ನು ಹಾಗೂ ಅವರು ಮಾಡಿದಂಥ ಕಾರ್ಯಗಳನ್ನು ನಾವು ನೋಡಿದಾಗ. ಸನ್ಮಾನ್ಯ ಅಧ್ಯಕ್ಷರೆ, ನನಗೂ ಕೂಡ ಮೊನ್ನೆ ಗೋಕಾಕ್‌ಗೆ ಹೋಗುವ ಸಂದರ್ಭ ಸಿಕ್ಕಿತ್ತು. ನಾನು ಆಗ ಸೌಂದತ್ತಿಗೆ ಕೂಡ ಹೋಗಿದ್ದೆ. ಅದು ಬಹುಶಃ ಮೂರನೇ ಹುಣ್ಣಿಮೆ ಇರಬಹುದು. ಅವತ್ತು ಅಲ್ಲಿ ಸೇರಿರತಕ್ಕಂಥ ಜನಸಮೂಹವನ್ನು ನೋಡಿದರೆ, ನಾನು ಹೋದಾಗ ಕಾಲು ಇಡುವುದಕ್ಕೂ ಕೂಡ ಅಲ್ಲಿ ಜಾಗ ಇರಲಿಲ್ಲ. ಆ ಒಂದು ದೇವಸ್ಥಾನದ ಅಭಿವೃದ್ಧಿಯ ಬಗ್ಗೆ ನಾನು ಆಡಳಿತ ಮಂಡಳಿಯವರ ಜೊತೆ ಮಾತನಾಡಿದಾಗ ಅವರು ಹೇಳುತ್ತಿದ್ದರು. ಇಷ್ಟೊಂದು ಉನ್ನತ ಸ್ಥಿತಿಗೆ ಈ ದೇವಸ್ಥಾನ ಬರುವುದಕ್ಕೆ ತುಂಬಾ ಹೆಚ್ಚಿನ ಶ್ರಮ ವಹಿಸಿದ್ದ ಸನ್ಮಾನ್ಯ ಶ್ರೀ ಚಂದ್ರಶೇಖರ ಮಾಮನಿಯವರೇ ಕಾರಣ ಎಂದು ಹೇಳಿ, ಅವರು ಹಾಕಿಕೊಂಡಿದ್ದಂಥ ಕಾರ್ಯಕ್ರಮಗಳನ್ನು ಅಲ್ಲಿರತಕ್ಕಂಥ ಆಡಳಿತ ಮಂಡಳಿಯವರು ನನಗೆ ತೋರಿಸಿದರು. ಜೀವನದಲ್ಲಿ ಧಾರ್ಮಿಕ ಕಾರ್ಯವನ್ನು ಮಾಡಬೇಕಾದಂಥ ಆಸಕ್ತಿ ಇರತಕ್ಕಂಥ ವ್ಯಕ್ತಿಗಳಿಗೆ ಈ ರೀತಿ ಏನಾದರೂ ಒಂದು

ಹಠತೊಟ್ಟು, ಒಂದು ಸಾಧನೆಯನ್ನು ಮಾಡಬೇಕೆಂದು ತೀರ್ಮಾನ ಮಾಡುವುದಕ್ಕೆ ಅವರ ಆದರ್ಶ ಜೀವನದ ಒಂದು ಪಾತ್ರ. ಇದು ತುಂಬಾ ಮಹತ್ವಪೂರ್ಣವಾದ ಅಂಶವೆಂದು ನಾನು ಇಷ್ಟಪಡುತ್ತೇನೆ. ಜೊತೆಗೆ ಅನೇಕ ಕ್ಷೇತ್ರಗಳಲ್ಲಿ ನಾವು ರಾಜಕಾರಣಿಯಾಗಿ ಕೆಲಸ ಮಾಡುವಂಥ ಸಂದರ್ಭದಲ್ಲಿ ಸಹಕಾರ ಕ್ಷೇತ್ರ, ಶಿಕ್ಷಣ ಕ್ಷೇತ್ರದಲ್ಲಿ ಅವರು ಮಾಡಿದಂಥ ಸೇವೆ, ನಿಜಕ್ಕೂ ಕೂಡ ಮಾದರಿ, ಏಕೆಂದರೆ ಒಬ್ಬ ರಾಜಕಾರಣಿ ಅವರು ನಿಧನರಾದ ಮೇಲೆ ಅವರ ಸಂತಾಪ ಸೂಚಕ ಸಭೆಯಲ್ಲಿ ಮಾತನಾಡುವಂಥ ಒಂದು ವಾಡಿಕೆ ನಾವು ಎಲ್ಲಾ ಕಡೆ ಕಾಣುತ್ತೇವೆ. ಕೆಲವು ಪದಗಳನ್ನು ತುಂಬಲಾರದಂಥ ನಷ್ಟವೆಂದು ಹೇಳುತ್ತೇವೆ. ಆದರೆ ಇದು ವಾಡಿಕೆ ಅಲ್ಲ. ಶ್ರೀ ಚಂದ್ರಶೇಖರ ಮಾಮನಿಯವರ ಜೀವನ ನಿಜಕ್ಕೂ ಕೂಡ, ಅವರು ಶಿಕ್ಷಣ ಕ್ಷೇತ್ರದಲ್ಲಿ, ಸಹಕಾರ ಕ್ಷೇತ್ರದಲ್ಲಿ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಮತ್ತು ರಾಜಕೀಯ ಕ್ಷೇತ್ರದಲ್ಲಿ ನಡೆದುಕೊಂಡಂಥ ರೀತಿ, ಸರಳ ವ್ಯಕ್ತಿತ್ವ ಇದನ್ನೆಲ್ಲ ಗಮನಿಸಿದಾಗ ಇಂತಹ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡು ಬಡವಾಗಿದ್ದೆವೆಂದು ನನಗೆ ಅನಿಸುತ್ತದೆ. ಅವರ ಸಂತಾಪ ಸೂಚಕವನ್ನು ಯಾವ ರೀತಿ ಸೂಚಿಸಬೇಕೆಂದು ನನಗೆ ಅನಿಸಿದೆ ಎಂದರೆ, ಅವರ ಜೀವನವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ ಆಗ ಈ ಸಂತಾಪ ಸೂಚಕವನ್ನು ಮಾಡಿದಕ್ಕೆ ಸಾರ್ಥಕವಾಗುತ್ತದೆಂದು ನನಗೆ ಅನಿಸುತ್ತದೆ. ಅಧ್ಯಕ್ಷರೆ, ಈ ಸಂದರ್ಭದಲ್ಲಿ ಭಾರತೀಯ ಜನತಾ ಪಾರ್ಟಿಯ ಪರವಾಗಿ ಅವರ ಕುಟುಂಬ ವರ್ಗಕ್ಕೆ ಸದ್ಗತಿ ಸಿಗಲಿ, ಅವರ ಕುಟುಂಬ ವರ್ಗಕ್ಕೆ ಈ ದುಃಖವನ್ನು ಭರಿಸುವಂಥ ಶಕ್ತಿಯನ್ನು ಆ ಪರಮಾತ್ಮನು ಕೊಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು :— ಒಂದು ನಿಮಿಷ, ಮತ್ತೆ ಎಲ್ಲೋ ಸೆಲ್ಯೂಲರ್ ಫೋನ್ ಕೇಳಿಸುತ್ತಿದೆ. I think, I have to view it very very seriously. ತಮಗೆ ಏನಾಗಿದೆ ಎಂದು ನನಗೆ ಗೊತ್ತಾಗುತ್ತಿಲ್ಲ. ಸಭೆಯನ್ನು ಇನ್ನು ಏನಾದರೂ ಮಾಡುವುದಕ್ಕೆ ಇಷ್ಟಪಟ್ಟಿದ್ದಾರೋ?

ಶ್ರೀ ಸಿ. ಬೈರೇಗೌಡ :— ಪಾರ್ಲಿಮೆಂಟ್‌ನಲ್ಲಿ ಮಾಡುವ ತರಹ ಹೊರಗಡೆಯಿಂದ ಈ ಅಧಿವೇಶನದ ಒಳಗಡೆ ಬರುವಾಗ ಚೆಕ್ ಮಾಡಿ ಬಿಡುವ ವ್ಯವಸ್ಥೆ ಮಾಡುವುದು ಸೂಕ್ತವೆಂದು ನನಗೆ ಅನಿಸುತ್ತದೆ.

ಅಧ್ಯಕ್ಷರು :— ನೋಡಿ ಬೈರೇಗೌಡರೆ, ಶಾಸಕರಾಗಿ ಅಥವಾ ಆಫೀಸರ್ಸ್ ಗ್ಯಾಲರಿಗೆ ಬರತಕ್ಕಂಥವರಿಗೆ ಕನಿಷ್ಠ ಪ್ರಬುದ್ಧತೆ ಇರುತ್ತದೆಂದು ತಿಳಿದು ಜನ ಇವರನ್ನು

ಇಲ್ಲಿಗೆ ಆರಿಸಿ ಕಳುಹಿಸಿರುವ ಜನರಿಗೆ ಅಪಮಾನ ಆಗಬಾರದು. ಏನು ಇಡುವುದು ಅಲ್ಲಿ ಚಿಕ್ ಮಾಡುವುದಕ್ಕೆ?

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಅಧ್ಯಕ್ಷರೆ, ಶ್ರೀ ಚಂದ್ರಶೇಖರ ಮಾಮನಿಯವರ ನಿಧನದಿಂದ ಈ ಸದನಕ್ಕೆ ಅಪಾರವಾದಂಥ ನಷ್ಟವಾಗಿದೆ. ನಮಗೆ ಶ್ರೀ ಚಂದ್ರಶೇಖರ ಮಾಮನಿಯವರ ಕಾರ್ಯಾಲಯದಲ್ಲಿ ಪ್ರತಿನಿತ್ಯ ಅವರ ಜೊತೆಯಲ್ಲಿ ಸೇರತಕ್ಕಂಥ ಸುಯೋಗ ಹಾಗೂ ಗಂಟೆಗಟ್ಟಲೆ ಮಾತನಾಡತಕ್ಕಂಥ ಅಪಾರವಾದ ವಿಶ್ವಾಸ ದೊರಕಿತ್ತು. ಅವರ ನಿಧನವಾದ ಮರುದಿನದಿಂದಲೇ ಅವರ ಕಾರ್ಯಾಲಯ ನೋಡಿದರೆ ಒಂದು ರೀತಿಯ ನೋವಿನ ಪ್ರಸಂಗ ಅವರ ಕಾರ್ಯಾಲಯಕ್ಕೆ ಬಂದಿದೆ. ಈ ಸದನದಲ್ಲಿ ಅನೇಕ ಸಂದರ್ಭದಲ್ಲಿ ಸದನವನ್ನು ಮುಂದೂಡುವಂತೆ ತಾವು ತೆಗೆದುಕೊಂಡ ನಿರ್ಧಾರವನ್ನು ಅವರು ಚಾಚೂತಪ್ಪದೆ ನಿಜಕ್ಕೂ ಮೆಚ್ಚತಕ್ಕಂಥ ರೀತಿಯಲ್ಲಿ ಅವರು ಸದನವನ್ನು ಮುಂದೂಡುತ್ತಿದ್ದರು ಇದು ಸತ್ಯ. ವಸ್ತುನಿಷ್ಠೆಯನ್ನು ಹೇಳುವಾಗ ಈ ವಿಚಾರದಲ್ಲಿ ಒಬ್ಬ ಪ್ರಾಮಾಣಿಕವಾದ ವ್ಯಕ್ತಿ ಎಂದು ಹೇಳಬೇಕಾಗುತ್ತದೆ. ನಾವು ಈ ರೀತಿ ಗುಣಗಾನಗಳನ್ನು ಯಾರಾದರೂ ತೀರಿಕೊಂಡಾಗ ಮಾಡತಕ್ಕಂಥದ್ದು ಇದು ಸ್ವಾಭಾವಿಕವಾಗಿಯೇ ಇದೆ. ಹೆಚ್. ಸಿದ್ಧಯ್ಯನವರ ಕಾಲದಿಂದ ಹಾಗೂ ಹೆಚ್.ಎಸ್. ಸುಗ್ಗಪ್ಪನವರ ಕಾಲದಿಂದ ಈ ವಿಚಾರಗಳನ್ನು ಕೇಳಿದ್ದೇವೆ. ಇದು ಇಷ್ಟಕ್ಕೆ ನಿಲ್ಲದೆ ತಮ್ಮ ಕಾಲದಲ್ಲಾದರೂ ಶಾಸಕರಾಗಲಿ ಅಥವಾ ಯಾರೇ ನಿಧನರಾಗಲಿ ಅವರ ಬಗ್ಗೆ ಈ ಸದನದಲ್ಲಿ ಅಥವಾ ಶಾಸಕಾಂಗದಲ್ಲಿ ಅವರ ಸ್ಮಾರಕವನ್ನು ಮುಂದಿನ ಪೀಳಿಗೆ ನೋಡುವುದಕ್ಕೆ ಹಾಗೂ ಅವರು ಎಷ್ಟು ದಿವಸ ಇದ್ದರು, ಏನು ಕೆಲಸವನ್ನು ಮಾಡಿದ್ದಾರೆ ಮತ್ತು ಏನೇನು ವಿಚಾರ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ಪುಸ್ತಕ ರೂಪದಲ್ಲಿ ಸರ್ಕಾರ ಮತ್ತು ಶಾಸಕಾಂಗ ಎರಡು ಸೇರಿ ಮಾಡಿದರೆ ಮುಂದೆ ಬಂದು ಓದುವವರಿಗೆ ಮಾರ್ಗದರ್ಶನ ಆಗುತ್ತದೆ. ಆ ಮಾರ್ಗದರ್ಶನ ಆಗುವುದಕ್ಕೆ ತಾವು ಅತ್ಯಂತ ಹೆಚ್ಚಿನ ರೀತಿಯಲ್ಲಿ ಜವಾಬ್ದಾರಿ ವಹಿಸಬೇಕೆಂದು ಹೇಳಿ ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ ) :— ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ ಮಾಮನಿಯವರು ತೀರಿಕೊಂಡ ಒಂದು ಸುದ್ದಿ ಆಘಾತಕಾರಿ ಸುದ್ದಿಯಾಗಿ ಆಕಸ್ಮಿಕವಾಗಿ ಆಯಿತು. ನಮಗೆಲ್ಲ ಅವರು ಸದನದಲ್ಲಿ ಮಾತನಾಡುವಾಗ ಕೂಡ್ರಿ ಎಂದು ಹೇಳುತ್ತಿದ್ದರು ಅದು ನಮಗೆ ಖುಷಿ ಕೊಡುತ್ತಿತ್ತು ಹಾಗೂ ಹೆಚ್ಚು ಮಾತನಾಡಬೇಕೆಂದು ಪ್ರೋತ್ಸಾಹ ಸಿಗುತ್ತಿತ್ತು. ಯಾವುದೇ ಶಾಸಕರು ಮಾತನಾಡುವಂಥ ಸಂದರ್ಭದಲ್ಲಿ ಅವರು ಅಡಚಣೆ ಅಥವಾ ಬೇರೆ ರೀತಿಯಲ್ಲಿ ಡೈವರ್ಟ್ ಮಾಡುತ್ತಿರಲಿಲ್ಲ. ಅವರು ಕೂಡ್ರಿ ಎಂದು ಹೇಳುವಂಥ ಮಾತನ್ನು ಬಹಳ

ಕಠಿಣವಾಗಿ ಹೇಳಿದರೆ ಕೂಡ್ರಬೇಕು. ಅದನ್ನು ಹೇಳುವಾಗ ನಮಗೆ ಬಹಳ ಖುಷಿಯಾಗುತ್ತಿತ್ತು. ಅವರು ನಮ್ಮನ್ನು ಕೂಡಿಸಿಯೇ ಬಿಡುವವರು. ನೀವಾದರೆ ಒಂದೆರಡು ನಿಮಿಷ ಮಾತನಾಡಲು ಅವಕಾಶ ಕೊಡುತ್ತಿದ್ದಿರಿ. ಆದರೆ ಅವರು ಕೂಡ್ರಿ ಅಂದರೆ ಕೂಡಬೇಕು. ಈ ರೀತಿ ಅಷ್ಟೇ ವಿಶಾಲವಾದ ಹೃದಯ ಇದ್ದರು ಕೂಡ, ಕರ್ತವ್ಯ ಪ್ರಜ್ಞೆಯನ್ನು ಕಟುವಾಗಿ ವರ್ತಿಸುವಂತವರು. ನಮಗೆಲ್ಲ ಅವರ ನಿಧನದಿಂದ ಬಹಳ ದುಃಖವಾಗಿದೆ. ಹಾಗಾಗಿ ನಾನು ಕೂಡ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಸನ್ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಉಪಾಧ್ಯಕ್ಷರಾಗಿದ್ದಂಥ ಚಂದ್ರಶೇಖರ ಮಾಮನಿಯವರನ್ನು ನಾವು ಕಳೆದುಕೊಂಡಿದ್ದೇವೆ. ಆದರೆ ಅವರು ಎಷ್ಟು ಗಂಭೀರವಾಗಿ ಇರುತ್ತಿದ್ದರು ಅಷ್ಟೇ ಹಾಸ್ಯಪ್ರವೃತ್ತಿಯವರಾಗಿ ಇರುತ್ತಿದ್ದರು. ಅವರ ಗುಣಗಾನವನ್ನು ನಾವು ಮಾಡುವುದಕ್ಕೆ ಮುಂಚೆ, ತಮ್ಮ ಜೀವನದಲ್ಲಿ ಅವರು ರೈತರ ಬಗ್ಗೆ ಹೆಚ್ಚು ಕಾಳಜಿ ಇಟ್ಟುಕೊಂಡಿದ್ದರು, ಅಂತಹ ಮನಸ್ಸನ್ನು ನಾವು ಬೆಳೆಸಿಕೊಳ್ಳುವುದರ ಮೂಲಕ ಅವರ ಆತ್ಮಕ್ಕೆ ಶಾಂತಿಯನ್ನು ಅರ್ಪಿಸುವಂಥ ಕೆಲಸವನ್ನು ಮಾಡಿ ಅವರ ನಿಧನದಿಂದ ಆಗಿರುವ ದುಃಖವನ್ನು ಅವರ ಕುಟುಂಬ ವರ್ಗದವರು ತಡೆದುಕೊಳ್ಳಲಿಕ್ಕೆ ಭಗವಂತನು ಶಕ್ತಿಯನ್ನು ಕೊಡಲಿ ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಯ್ಯದ್ ಜುಲ್ಫೀಕರ್ ಹಶ್ಮಿ (ಬೀದರ್) :— ಸನ್ಮಾನ್ಯ ಅಧ್ಯಕ್ಷರೆ, ಈ ಸದನದ ಉಪಾಧ್ಯಕ್ಷರಾದ ಮಾನ್ಯ ಶ್ರೀ ಚಂದ್ರಶೇಖರ ಮಾಮನಿಯವರು ಈಗ ನಿಧನರಾಗಿದ್ದಾರೆ. ನಾನು ಭಾಷಣ ಮಾಡುತ್ತಾ ಇಲ್ಲ, ಅವರು ಈಗ ಆ ಕುರ್ಚಿಯ ಮೇಲೆ ಇವತ್ತು ಇಲ್ಲ. ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಮಗೆ ಅವರು ಸಹಾಯ ಮಾಡುತ್ತಿದ್ದರು, ಒಂದೊಂದು ಸಲ ನಮ್ಮ ಮೇಲೆ ಸಿಟ್ಟು ಕೂಡ ಮಾಡುತ್ತಿದ್ದರು. ನಮಗೆ ಮಾತನಾಡಲು ಸಾಕಷ್ಟು ಸಮಯಾವಕಾಶವನ್ನು ಕೊಡುತ್ತಿದ್ದರು. ಅಂತಹ ವ್ಯಕ್ತಿ ಈಗ ಇಲ್ಲ. ನಮ್ಮ ಬಹುಜನ ಸಮಾಜ ಪಾರ್ಟಿ ವತಿಯಿಂದ ಅವರಿಗೆ ಸಂತಾಪವನ್ನು ಅರ್ಪಿಸುತ್ತೇನೆ.

1.10 ಪಿ.ಎಂ.

SRI B.I. PATIL (UCHAGGON) :— Mr. speaker sir. I rise to participate in the discussion condoling the sad demise of our Hon'ble Deputy speaker Chandrashekar Mamani.

Mr. Speaker :— Sir. it is a personal loss tome because he was one of my very good friends. He was from my district. He was know for his simplicity and he was liked by one and all.

He championed the cause f co-operative movement in the State in general and in Belgaum District in particular. He nurtured so many co-operative institutions coming under his Constituency.

Mr. Mamani also contributed much for the proceedings of our House when he occupied the Chair. He was a guiding force to the House while he was conducting the Proceedings. He also upheld the dignity and decorum of this House.

On behalf of M.E.S., I condole the death of Sri. Mamani and pray to the almighty to give courage to his family Members to withstand shock due to his death. May his soul rest in peace.

Thank you sir.

+ ಶ್ರೀ ಬಿ. ಮುನಿಯಪ್ಪ (ಗಾಂಧೀನಗರ):— ಸನ್ಮಾನ್ಯ ಅಧ್ಯಕ್ಷರೆ, ಶಾಸನಸಭೆಯ ಉಪಾಧ್ಯಕ್ಷರಾಗಿದ್ದಂತಹ ಶ್ರೀ ಚಂದ್ರಶೇಖರ ಮಾಮನಿಯವರು ನಮ್ಮಿಂದ ಕಣ್ಮರೆಯಾದರು ಎಂಬ ಸುದ್ದಿಯನ್ನು ದಿನಪತ್ರಿಕೆಯಲ್ಲಿ ಓದಿ ನನಗೆ ಆಶ್ಚರ್ಯವಾಯಿತು. ಅವರು ಬೆಂಗಳೂರು ನಗರದಲ್ಲಿ ಇದ್ದಂತಹ ಸಂದರ್ಭದಲ್ಲಿ ಪ್ರತಿನಿತ್ಯ ಬೆಳಿಗ್ಗೆ ಕಬ್ಬನ್‌ಪಾರ್ಕ್‌ನ ಪ್ರದೇಶಗಳಲ್ಲಿ ಓಡಾಡುವಂತಹ ಪರಿಪಾಠವನ್ನು ಬೆಳಸಿಕೊಂಡಿದ್ದರಲ್ಲದೆ, ಒಳ್ಳೆಯ ಆರೋಗ್ಯವನ್ನು ಇಟ್ಟುಕೊಂಡಿದ್ದರು. ಶ್ರೀಯುತರು ಸುಮಾರು ಎರಡೂವರೆ ವರ್ಷಗಳ ಕಾಲ ವಿಧಾನಸಭೆಯ ಉಪಾಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದ ದಿನಗಳಲ್ಲಿ ಈ ಸದನ ಮುಗಿಯುವ ಅಂತ್ಯದಲ್ಲಿ ಅಂದರೆ ಕೊನೆಯ ಗಳಿಗೆಯಲ್ಲಿ ಬಹುಪಾಲು ನಾವೆಲ್ಲರೂ ಮಾತನಾಡುವಂತಹ ಅವಕಾಶ ಸಿಗುತ್ತಾ ಇತ್ತು. ಆಗ ತಾವು (ರಮೇಶ್ ಕುಮಾರ್) ಅಧ್ಯಕ್ಷ ಸ್ಥಾನದಲ್ಲಿ ಇರುತ್ತಾ ಇರಲಿಲ್ಲ. ತಾವು ಅಧ್ಯಕ್ಷ ಸ್ಥಾನದಲ್ಲಿ ಇದ್ದಾಗ ತಮ್ಮ ಬಳಿ ಮಾತನಾಡುವುದಕ್ಕೆ ಅವಕಾಶವನ್ನು ಕೇಳಿದರೆ ಅಷ್ಟು ತೊಂದರೆ ಆಗುತ್ತಾ ಇರಲಿಲ್ಲ. ಉಪಾಧ್ಯಕ್ಷರು ಇರುವಂತಹ ಸಂದರ್ಭಗಳಲೆಲ್ಲಾ ಅವರು ಅಧ್ಯಕ್ಷ ಸ್ಥಾನದಲ್ಲಿ ಆಸೀನರಾದಾಗ ನಾವು ನಮ್ಮ ಭಾಷಣಗಳ ಮೂಲಕ ವ್ಯಕ್ತಪಡಿಸುವ ನಮ್ಮ ಅನಿಸಿಕೆಗಳನ್ನು ಮೊಟಕು ಮಾಡುತ್ತಾರೆಂದು ನಾವು ಮೊದಲೇ ತೀರ್ಮಾನ ಮಾಡಿಬಿಡುತ್ತಿದ್ದೆವು. ಶ್ರೀಯುತರು ಸಮಯ ಹಾಗೂ ಕಾಲದ ಪ್ರಜ್ಞೆಯನ್ನು ಚೆನ್ನಾಗಿ ತಿಳಿದುಕೊಂಡಿದ್ದರು. ಅವರು ಉಪಾಧ್ಯಕ್ಷ ಸ್ಥಾನದಲ್ಲಿ ಆಸೀನರಾಗಿದ್ದಾಗ ಚರ್ಚೆಯ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳನ್ನು ಉದ್ದೇಶಿಸಿ ತಮ್ಮದೇ ಆದ ಶೈಲಿಯಲ್ಲಿ "ಕೂಡ್ರಲಾ, ಮುಗಿಸ್ರಲಾ" ಎಂದು ಹೇಳುತ್ತಿದ್ದರು. ಈ ಸದನಕ್ಕೆ ಅವರ ಕ್ಷೇತ್ರದ ಭಾಗದಿಂದ ಚುನಾಯಿತರಾಗಿ ಬಂದಂತಹ ಯಾವುದೇ ಸದಸ್ಯರು ಕೂಡ ಅವರ ಧಾಟಿಯಲ್ಲಿ ಮಾತನಾಡುತ್ತಿರಲಿಲ್ಲ. ಅಲ್ಲದೆ ಕಿವಿಗೆ ಇಂಪಾಗುವ ರೀತಿಯಲ್ಲಿ ಮಾತನಾಡುತ್ತಿದ್ದರು. ಅವರು ಒಳ್ಳೆಯ ಉಪಾಧ್ಯಕ್ಷರಾಗಿ ತಮ್ಮ ಕಾರ್ಯ ನಿರ್ವಹಿಸಿದ್ದರು. ಅವರು ಬಿಟ್ಟುಹೋಗಿರುವ ಕೆಲಸವನ್ನು ನಾವುಗಳು ಚಾಚುತಪ್ಪದೆ ಮುಂದುವರಿಸಿಕೊಂಡು ಹೋಗಬೇಕು. ಅವರ ನಿಧನದಿಂದ ಅವರ ಕುಟುಂಬಕ್ಕೆ, ಪಕ್ಷಕ್ಕೆ ಹಾಗೂ ಅವರು ಪ್ರತಿನಿಧಿಸುತ್ತಿದ್ದ ಆ ಭಾಗದ ಜನರಿಗೆ ಆಗಿರತಕ್ಕಂತಹ ನಷ್ಟವನ್ನು ತುಂಬುವಂತಹ ಶಕ್ತಿಯನ್ನು ಆ ಭಗವಂತನು ನೀಡಲೆಂದು

ತಾವು ತಂದಿರತಕ್ಕಂತಹ ಸಂತಾಪ ಸೂಚಕ ನಿರ್ಣಯವನ್ನು ನಾನು ಬೆಂಬಲಿಸಿ ನನ್ನ ಸಂತಾಪವನ್ನು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ವಿ.ಎಸ್. ಕೌಜಲಗಿ (ಅರಬಾವಿ):— ಸನ್ಮಾನ್ಯ ಅಧ್ಯಕ್ಷರೆ, ಈ ಸದನದ ಉಪಾಧ್ಯಕ್ಷರಾಗಿದ್ದ ಶ್ರೀ ಚಂದ್ರಶೇಖರ ಮಾಮನಿಯವರ ಅಕಾಲಿಕ ನಿಧನ ನಮಗೆಲ್ಲರಿಗೂ ತುಂಬಲಾರದ ಹಾನಿಯಾಗಿದೆ. ಏಕೆಂದರೆ, ಶ್ರೀಯುತರು ನನ್ನ ಪಕ್ಕದ ಕ್ಷೇತ್ರದಿಂದ ಚುನಾಯಿತರಾಗಿ ಬಂದಿದ್ದರು. ಮೂಲತಃ ಅವರು ತುಂಬಾ ಶ್ರಮಜೀವಿಯಾಗಿದ್ದರು, ಹಾಗೂ ಕೆಲಸವನ್ನು ಸದಾ ತಲೆಯಲ್ಲಿ ಇಟ್ಟುಕೊಂಡು ಕೆಲಸ ಮಾಡುತ್ತಿದ್ದರು. ಅದಕ್ಕೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಒಂದು ಸೋಮವಾರದ ದಿವಸ ನನ್ನನ್ನು ಹಾಗೂ ಗೋಕಾಕ್ ಶಾಸಕರಾದ ಶ್ರೀ ಸಿ.ಎಸ್. ನಾಯಕ್‌ರನ್ನು ಕರೆಸಿ ಹೇಳಿದರು. ಆವತ್ತು ಅಲ್ಲಿ ಹೊಡೆದಾಟ ಆಗಿ ಗಾಡಿಗಳು ಲುಕ್ಸಾನ್ ಆಗಿದ್ದವು. ಅವರು ನಮ್ಮನ್ನು ತಮ್ಮ ಚೇಂಬರ್‌ನಲ್ಲಿ ಕೂಡಿಸಿಕೊಂಡು ಸುಮಾರು ಒಂದೂವರೆ ಗಂಟೆಗಳ ಕಾಲ ಜಿಲ್ಲೆಯಲ್ಲಿನ ಕೆಲಸಗಳ ಬಗ್ಗೆ ಮಾತನಾಡಿದ ಬಳಿಕ ನಮಗೆ ಊಟವನ್ನು ಹಾಕಿಸಿದರು. ಏಕೋ ಏನೋ ನನಗೆ ಗೊತ್ತಾಗಲಿಲ್ಲ. 14ನೇ ತಾರೀಖು ಬೆಳಗಾಂನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಕಾರ್ಯಕ್ರಮ ಇತ್ತು. ನಾವೆಲ್ಲರೂ ಬುಧವಾರ ಒಟ್ಟಾಗಿ ಸೇರಿ ಜಿಲ್ಲೆಯ ಬಗ್ಗೆ ಚರ್ಚೆಯನ್ನು ಮಾಡೋಣವೆಂದು ನನಗೆ ಮತ್ತು ಚಂದ್ರಶೇಖರ ನಾಯಕ್‌ರವರಿಗೆ ಹೇಳಿದ್ದರು. ಆದರೆ ದೈವದ ಇಚ್ಛೆಯೇ ಬೇರೆಯಾಗಿತ್ತು. ನಾವೆಲ್ಲರೂ ಒಟ್ಟಿಗೆ ಕೂಡುವ ಮೊದಲೇ ಅವರು ನಮ್ಮನ್ನಗಲಿ ಹೋದರು. ಅವರು ಇದ್ದ ಅಲ್ಪಸಮಯದಲ್ಲಿಯೇ ಉಪಾಧ್ಯಕ್ಷರ ಕಾರ್ಯವನ್ನು ಬಹಳ ಜಾಣತನದಿಂದ, ಚುರುಕುತನದಿಂದ ಸಭೆಯ ಘನತೆ-ಗೌರವಗಳನ್ನು ಕಾಪಾಡಿಕೊಂಡು ಕಲಾಪವನ್ನು ಸುಗಮವಾಗಿ ನಡೆಸಿಕೊಂಡು ಹೋದಂತಹ ವ್ಯಕ್ತಿಯಾಗಿದ್ದರು. ಅಂತಹ ವ್ಯಕ್ತಿ ಇವತ್ತು ನಮ್ಮಲ್ಲಿ ಇಲ್ಲ. ಅವರು ಬಿಟ್ಟು ಹೋದಂತಹ ಆದರ್ಶಗಳು ಏನಿವೆ ಅವುಗಳನ್ನು ನಾವು ಪಾಲನೆ ಮಾಡೋಣ. ಅವರ ಕುಟುಂಬಕ್ಕೆ ಆಗಿರುವ ನೋವು ಏನಿದೆ, ಆ ನೋವನ್ನು ಪರಮಾತ್ಮನು ತುಂಬಿಕೊಡಲಿ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು):— ಸನ್ಮಾನ್ಯ ಅಧ್ಯಕ್ಷರೆ, ಇವೊತ್ತು ಶ್ರೀ ಚಂದ್ರಶೇಖರ ಮಾಮನಿಯವರನ್ನು ನಾವುಗಳು ಕಳೆದುಕೊಂಡಿದ್ದೇವೆ. ಇವತ್ತು ಸದನದಲ್ಲಿ ಮಂಡಿಸಿರುವ ಸಂತಾಪಸೂಚಕ ನಿರ್ಣಯಕ್ಕೆ ನಾನು ಮನ್ನಣೆಯನ್ನು ಕೊಟ್ಟು ಅವರ ನಿಧನದಿಂದ ಹೆಚ್ಚಿನ ಹಾನಿಯಾಗಿರುವುದು ಕೇವಲ ಈ ಸಭೆಗೆ ಮಾತ್ರವಲ್ಲ ನಮ್ಮ ಬೆಳಗಾವಿ ಜಿಲ್ಲೆಗೆ ಆಗಿದೆ. ಬೆಳಗಾವಿ ಜಿಲ್ಲೆಯ ಹಿರಿಯ ಮುತ್ಸದ್ದಿ ರಾಜಕಾರಣಿ ಹಾಗೂ ನಿಷ್ಠುರವಾಗಿ ಕೆಲಸ ಮಾಡತಕ್ಕಂತಹ ಕೆಲವು ವ್ಯವಸ್ಥೆಯನ್ನು ಜೀವನದಲ್ಲಿ ಬೆಳೆಸಿಕೊಂಡು ಬಂದಿದ್ದರು. ಮರಣ ಎಂಬುದು ಕೆಲವರಿಗೆ ಬಹಳ ಒಳ್ಳೆಯ ಕಾಲದಲ್ಲಿ ಬರುತ್ತದೆ ಎಂಬುದಕ್ಕೆ ಶ್ರೀ ಚಂದ್ರಶೇಖರ ಮಾಮನಿಯವರ ಮರಣವೇ ಸಾಕ್ಷಿಯಾಗಿದೆ. ಮಕರ ಸಂಕ್ರಾಂತಿ, ಉತ್ತರಾಯಣ ಪುಣ್ಯಕಾಲದಲ್ಲಿ ಅಂದರೆ ಜನವರಿ 14ರ ದಿವಸ ಅವರು ಬೆಳಗಾವಿಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಒಂದು

ಕಾರ್ಯಕ್ರಮದ ನಿಮಿತ್ತ ಅವತ್ತು ಅಲ್ಲಿಯೇ ಇದ್ದರು, ಆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳು ಬರುವುದಕ್ಕೆ ಸಿದ್ಧವಾಗಿರುವಾಗ ವಿಧಿ ನಮ್ಮನ್ನೆಲ್ಲಾ ಅಗಲಿಸಿತು. ಅವರು ಹಗಲುರಾತ್ರಿ ಕ್ಷೇತ್ರದ ಬಗ್ಗೆ ಚಿಂತನೆ ಮಾಡತಕ್ಕಂತಹ ಒಬ್ಬ ಹಿರಿಯ ಮುತ್ಸದ್ದಿಯಾಗಿದ್ದು, ಸವದತ್ತಿ ಎಲ್ಲಮ್ಮ ದೇವಸ್ಥಾನದ ಸಮಗ್ರ ಬೆಳವಣಿಗೆ ಹಾಗೂ ಮಹದಾಯಿ ನೀರಾವರಿ ಯೋಜನೆಯನ್ನು ನಾವೆಲ್ಲರೂ ಸೇರಿ ಪೂರ್ತಿಗೊಳಿಸಿದಲ್ಲಿ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆಂದು ತಿಳಿದಿದ್ದೇನೆ. ಬೆಳಗಾವಿ ಜಿಲ್ಲೆಯವರಾದ ನಾವುಗಳು ಅವರನ್ನು ಕಳೆದುಕೊಂಡು ತುಂಬಾ ಬಡವರಾಗಿದ್ದೇವೆ. ಇಂದು ನಾವುಗಳು ಒಬ್ಬ ಹಿರಿಯ ಮುತ್ಸದ್ದಿ ರಾಜಕಾರಣಿಯನ್ನು ಕಳೆದುಕೊಂಡಿದ್ದೇವೆ. ದಿವಂಗತರ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಿ ಅವರ ಅಗಲಿಕೆಯಿಂದ ಅವರ ಕುಟುಂಬಕ್ಕಾಗಿರುವ ನಷ್ಟವನ್ನು ಭರಿಸಿಕೊಡಲೆಂದು ಹಾರೈಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್. ಯಾವಗಲ್ (ನರಗುಂದ):— ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಉಪಾಧ್ಯಕ್ಷರಾಗಿದ್ದಂತಹ ಶ್ರೀ ಚಂದ್ರಶೇಖರ ಮಾಮನಿಯವರ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸುತ್ತಾ, ಅವರು ಎಲ್ಲರಿಗೂ ಸ್ನೇಹಿತರಾಗಿದ್ದರಲ್ಲದೆ ಅಜಾತಶತ್ರುವಾಗಿದ್ದಂತಹ ಒಬ್ಬ ಹಿರಿಯ ನಾಯಕರಾಗಿದ್ದರು ಎಂದು ಹೇಳುವುದರ ಜೊತೆಗೆ ವಿಶೇಷವಾಗಿ ಶ್ರೀಯುತರು ರೇಣುಕಾ ಎಲ್ಲಮ್ಮನ ಧರ್ಮಕ್ಷೇತ್ರಕ್ಕೆ ಒಂದು ಹೊಸರೂಪವನ್ನು ಕೊಟ್ಟಿದ್ದಾರೆಂದರೆ ತಪ್ಪಾಗಲಾರದು ಇದೊಂದು ಪವಿತ್ರವಾದಂತಹ ಪುಣ್ಯಕ್ಷೇತ್ರವಾಗಿದ್ದು ಇಲ್ಲಿಗೆ ಲಕ್ಷಲಕ್ಷ ಗಟ್ಟಲೆ ಜನರು ಪಕ್ಕದ ಮಹಾರಾಷ್ಟ್ರದಿಂದ ಹಾಗೂ ಕರ್ನಾಟಕದ ಇತರ ಭಾಗಗಳಿಂದ ಬರುತ್ತಿದ್ದ ಕಾಲದಲ್ಲಿ ಅಲ್ಲಿ ಕನಿಷ್ಟ ಸೌಲಭ್ಯಗಳು ಸಹ ದೊರೆಯಲಾರದ ಪರಿಸ್ಥಿತಿ ಇತ್ತು. ಆದರೆ, ಇವತ್ತು ಅಲ್ಲಿ ಹೋಗಿ ನೋಡಿದರೆ ಅತ್ಯಂತ ಕ್ರಾಂತಿಕಾರಕ ಬದಲಾವಣೆಗಳು ಆಗಿದೆ. ಆ ಕ್ಷೇತ್ರ ಬೆಳೆಯಬೇಕು, ಅಭಿವೃದ್ಧಿಯಾಗಬೇಕು ಎಂಬ ಕನಸು ಅವರದ್ದಾಗಿತ್ತು. ಸದ್ಯಕ್ಕೆ ನಾವು ಅವರ ನೆನಪನ್ನು ಉಳಿಸಬೇಕಾದರೆ ಆ ಕ್ಷೇತ್ರವನ್ನು ಇನ್ನಷ್ಟು ಅಭಿವೃದ್ಧಿಪಡಿಸುವ ಕಡೆ ನಾವು ಸರ್ಕಾರದ ಮುಖ್ಯಮಂತ್ರಿಗಳು ಗಮನಹರಿಸುತ್ತಾ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ ದಿವಂಗತರ ಕುಟುಂಬಕ್ಕೆ ನನ್ನ ಸಂತಾಪವನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು):— ಸನ್ಮಾನ್ಯ ಅಧ್ಯಕ್ಷರೆ, ಈ ಸದನದ ಹಿರಿಯ ರಾಜಕಾರಣಿಗಳು, ಉಪಾಧ್ಯಕ್ಷರಾಗಿದ್ದಂತಹ ಶ್ರೀ ಚಂದ್ರಶೇಖರ ಮಾಮನಿಯವರ ನಿಧನದ ಬಗ್ಗೆ ತಾವು ಸಂತಾಪ ಸೂಚಕ ನಿರ್ಣಯವನ್ನು ಮಂಡಿಸುವಂತಹ ಸಂದರ್ಭದಲ್ಲಿ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಅವರ ಬಗ್ಗೆ ಗುಣಗಾನ ಮಾಡುವಂತಾದ್ದು ಸಹಜ. ಒಬ್ಬ ಮನುಷ್ಯ ಬದುಕಿರುವಂತಹ ಸಂದರ್ಭದಲ್ಲಿ ಅನೇಕ ರೀತಿಯಲ್ಲಿ ನಾವು ಮಾತನಾಡುತ್ತೇವೆ. ಆದರೆ ನಿಧನ ಹೊಂದಿದ ನಂತರ ಅವರ ಬಗ್ಗೆ ಹೊಗಳಿಕೆಯಿಂದ ನಾವು ಮಾತನಾಡುತ್ತೇವೆ. ನನ್ನ ಮತ್ತು ಉಪಾಧ್ಯಕ್ಷರ ಸಂಪರ್ಕ ಈ ಸದನದಲ್ಲಿ ಬಹಳ ಉತ್ತಮವಾದ ರೀತಿಯಲ್ಲಿ ನಡವಳಿಕೆಗಳಲ್ಲಿಯೂ ಸಹ ಸಾಕಷ್ಟು ಅವಕಾಶಗಳು ಮಾತನಾಡುವಂತಹ ಸಂದರ್ಭದಲ್ಲಿ ಕಲ್ಪಿಸಿಕೊಡುವುದರ ಜೊತೆಗೆ ಅವರು ಪದೇ

ಪದೇ ಹೇಳುವಂತಹ ಒಂದು ಮಾತನ್ನು ಇವತ್ತು ಕಿವಿಯಲ್ಲಿ ಗುನುಗುನಿಸುತ್ತಿರುವಂತೆ ನನಗೆ ಅನ್ನಿಸುತ್ತದೆ. ಅದೇನೆಂದರೆ, "ಸಮಯದ ಅಭಾವವಿರುವುದರಿಂದ ತಾವು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುತ್ತಿದ್ದೀರಿ ಆದ್ದರಿಂದ ತಾವು ಕುಳಿತುಕೊಳ್ಳಿ, ಕುಳಿತುಕೊಳ್ಳಿ" ಎಂದು ಹೇಳುತ್ತಿದ್ದ ಮಾತುಗಳು ಇವತ್ತು ನಾನು ಸದನಕ್ಕೆ ಹಾಜರಾದಾಗ ಆ ಮಾತುಗಳು ನನಗೆ ಕೇಳಿಸುತ್ತಿವೆ. ಆದರೆ, ಅವರು ಒಳ್ಳೆಯ ವ್ಯಕ್ತಿಯಾಗಿದ್ದರು. ನನ್ನ ಎಲ್ಲಾ ಸ್ನೇಹಿತರು ಮಾತನಾಡಿದ ಹಾಗೆ ಶ್ರೀಯುತರು ಉತ್ತಮ ರಾಜಕಾರಣಿಯಾಗಿ, ಜನಜೀವನದಲ್ಲಿ ಉತ್ತಮ ಸೇವೆಯನ್ನು ಮಾಡಿ ಒಳ್ಳೆಯ ಹೆಸರನ್ನು ಪಡೆದು ಈ ಸದನದ ಉಪಾಧ್ಯಕ್ಷರಾಗಿ ಶಾಸಕರಿಗೆ ಒಂದು ಮಾದರಿಯಾಗುವ ದಿಸೆಯಲ್ಲಿ ಉಪಾಧ್ಯಕ್ಷರಾಗಿದ್ದರು ಎಂದು ಹೇಳಬೇಕಾಗುತ್ತದೆ. ಕಾರಣವೇನೆಂದರೆ, ನಾವು ರಾಜಕೀಯದ ಲಾಭ, ಆಸೆಗಳನ್ನು ಇಟ್ಟುಕೊಂಡು ದುಡಿಯುವುದರ ಬಗ್ಗೆ ಚಿಂತನೆಯನ್ನು ಮಾಡುವ ಬದಲಿಗೆ ಈ ರಾಜ್ಯದ ಜನರ ಬಗ್ಗೆ ಚಿಂತನೆಯನ್ನು ಮಾಡುವುದರ ಜೊತೆಗೆ ಕೆಲವು ರಾಜಕಾರಣಿಗಳ ಮಾರ್ಗದರ್ಶನದಲ್ಲಿ ನಡೆಯುವಂತಹ ಮಾದರಿಯಾಗಿ ಈ ಉಪಾಧ್ಯಕ್ಷ ಸ್ಥಾನವನ್ನು ಅಲಂಕರಿಸಿ ನಮ್ಮ ಅನೇಕ ಸದಸ್ಯರುಗಳಿಗೆ ಮಾರ್ಗದರ್ಶನಗಳನ್ನು ಹಾಗೂ ತಿಳುವಳಿಕೆಗಳನ್ನು ನೀಡಿದ್ದಾರೆ. ಅಂತಹ ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ನಮ್ಮನ್ನು ಅಗಲಿಹೋಗಿರುವಂತಹ ಶ್ರೀ ಚಂದ್ರಶೇಖರ ಮಾಮನಿಯವರಿಗೆ ಆ ಪರಮಾತ್ಮನು ಸ್ವರ್ಗವನ್ನು ನೀಡುವುದರ ಜೊತೆಗೆ ಅವರ ಕುಟುಂಬ ವರ್ಗದವರಿಗೆ ಆಗಿರುವ ನಷ್ಟವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:— ದಿವಂಗತರಾದ ಶ್ರೀಚಂದ್ರಶೇಖರ ಮಾಮನಿಯವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು).

ಅಧ್ಯಕ್ಷರು:— ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಈಗ ಸಭೆಯನ್ನು ಮುಂದೂಡಿ ಸಭೆಯು ನಾಳೆ ಪುನಃ 11-00 ಗಂಟೆಗೆ ಸಮಾವೇಶಗೊಳ್ಳುವುದು.

(ಸಭೆಯು 1-21ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ನಾಳೆ ಮಂಗಳವಾರ ಬೆಳಿಗ್ಗೆ 11-00 ಗಂಟೆಗೆ ಸಭೆ ಸೇರಲು ನಿಶ್ಚಯಿಸಲಾಯಿತು.)

---

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)